ಪ್ರಶ್ನೆ

ಅ) ಭದ್ರಾವತಿಯ ಕಾಗದದ ಕಾರ್ಖಾನೆಯನ್ನು ಖಾಸಗೀಕರಣ ಮಾಡುತ್ತಿರುವುದು ಸತ್ಯವೇ?

ಆ) ಈಗ ಇದು ಉತ್ತಮ ಸ್ಥಿತಿಯಲ್ಲಿದ್ದು, ಇದಕ್ಕೆ ಸಕ್ಕರೆ ಕಾರ್ಖಾನೆ ಸಹ ಇರುವುದರಿಂದ ರೈತರಿಗೆ ಅನುಕೂಲಕರ ಹಾಗೂ ಲಾಭದಾಯಕವಾಗಿದ್ದರೂ ಖಾಸಗೀಕರಣವನ್ನು ಮಾಡಲಾಗುವುದೇ?

ಉತ್ತರ

ಅ) ಸಾರ್ವಜನಿಕ ವಲಯ ಸುಧಾರಣೆಗಳಿಗೆ ಸಂಬಂಧಿಸಿದಂತೆ, ಸರ್ಕಾರವು 6.2.2001ರಂದು ತನ್ನ ನೀತಿಯನ್ನು ಪರಿಚಯಿಸಿದೆ. ಈ ನೀತಿಗನುಗುಣವಾಗಿ ಇದರ ಮೊದಲ ಹಂತದ ಕಾರ್ಯಕ್ರಮದಲ್ಲಿ 15 ಸಾರ್ವಜನಿಕ ವಲಯದ ಉದ್ಯಮಗಳನ್ನು ಆಯ್ದುಕೊಳ್ಳಲಾಗಿದ್ದು, ಇವುಗಳ ಪೈಕಿ ಹತ್ತು ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣ ಮತ್ತು ಸುಧಾರಣೆಗಳಿಗಾಗಿ ಪರಿಗಣಿಸಲಾಗಿದೆ. ಈ ರೀತಿ ಖಾಸಗೀಕರಣ ಮತ್ತು ಸುಧಾರಣೆಗಳಿಗಾಗಿ ಆಯ್ದುಕೊಳ್ಳಲಾದ ಘಟಕಗಳ ಪೈಕಿ ಎಂ.ಪಿ.ಎಂ. ಭದ್ರಾವತಿ ಒಂದು ಉದ್ಯಮವಾಗಿದೆ.

ಆ) 15 ಸಾರ್ವಜನಿಕ ವಲಯದ ಉದ್ಯಮಗಳ ಪೈಕಿ 10 ಉದ್ಯಮಗಳನ್ನು ಖಾಸಗೀಕರಿಸುವ ಸರ್ಕಾರದ ನಿರ್ಧಾರವನ್ನು ಆಧರಿಸಿ, ಸಾರ್ವಜನಿಕ ವಲಯದ ಪುನರುತ್ಥಾನ ಆಯೋಗವು ಎಂ.ಪಿ.ಎಂ.ಬಗ್ಗೆ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿರುತ್ತದೆ. ಈ ವರದಿಯು ಇನ್ನು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಅಂತರ್ಜಲ ಉಪಯೋಗಿಸಲು ನಿಯಮ ರಚನೆ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 397(629)

ಸದಸ್ಯರ ಹೆಸರು : ಶ್ರೀ ಕರಿಯಣ್ಣ(ಹೊಳೆನರಸೀಪುರ)

ಉತ್ತರಿಸುವ ಸಚಿವರು : ಶ್ರೀ ವಿ.ಮುನಿಯಪ್ಪ(ಗಣಿ ಮತ್ತು ಭೂವಿಜ್ಞಾನ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಅಂತರ್ಜಲ ಹೆಚ್ಚು ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಅ) ಅಂತರ್ಜಲದ ಉಪಯೋಗ ಮತ್ತು ಇದಕ್ಕೆ ಕಡಿವಾಣ ಹಾಕಲು ಯಾವುದಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಇ) ಈ ಅಂತರ್ಜಲವನ್ನು ಉಪಯೋಗ ಮಾಡಬೇಕಾದರೆ ಒಂದು ಬೋರ್‌ವೆಲ್‌ನಿಂದ ಮತ್ತೊಂದು ಬೋರ್‌ವೆಲ್‌ಗೆ ಎಷ್ಟು ಅಂತರ ಇರಬೇಕು ಎಂಬುದಕ್ಕೆ ನಿಯಮ ಯಾವುದಾದರೂ ರಚನೆ ಮಾಡಲಾಗಿದೆಯೇ?

ಉತ್ತರ

ಅ) ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಿಸುವ ಮೂಲಕ ಅಂತರ್ಜಲ ವೃದ್ಧಿಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ.

ಆ) ರಾಜ್ಯದ 43 ಕ್ಲಿಷ್ಟಕರವೆಂದು ವರ್ಗೀಕರಿಸಲಾದ ತಾಲ್ಲೂಕುಗಳಲ್ಲಿ ಅಂತರ್ಜಲ ಉಪಯೋಗಿಸುವ ಬಗ್ಗೆ ಈಗಾಗಲೇ ನಿರ್ಬಂಧ ಜಾರಿಯಲ್ಲಿದೆ. ಅಂತರ್ಜಲ ನಿಯಂತ್ರಣ ಕಾಯ್ದೆಯ ಮಸೂದೆಯನ್ನು (ಗ್ರೌಂಡ್ ವಾಟರ್ ರೆಜಿಸ್ಲೇಷನ್ ಬಿಲ್) ಯೋಜಿಸಲಾಗಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು. ಎರಡು ನೀರಾವರಿ ಕೊಳವೆ ಬಾವಿಗಳ ಮಧ್ಯೆ ಅಂತರ 250 ಮೀಟರ್‌ಗಳು ಮತ್ತು ಎರಡು ನೀರಾವರಿ ತೋಡು ಬಾವಿಗಳ ನಡುವಿನ ಅಂತರ 182 ಮೀಟರ್‌ಗಳೆಂದು ನಿಗದಿಪಡಿಸಿ ಸರ್ಕಾರ ದಿನಾಂಕ:4-10-96ರಂದು ಆಜ್ಞೆ ಹೊರಡಿಸಿದೆ. ಇದಕ್ಕೆ ಸಂಬಂಧಿಸಿದಂತೆ ಕರಡು ಅಂತರ್ಜಲ ವಿಧೇಯಕವು ಸರ್ಕಾರದ ಪರಿಶೀಲನೆಯಲ್ಲಿದೆ.

ಗಣಿಗಾರಿಕೆ ಗುತ್ತಿಗೆ ನೀಡುವಲ್ಲಿ ಮೀಸಲಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 398(631)

ಸದಸ್ಯರ ಹೆಸರು : ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವವರು : ಶ್ರೀ ವಿ.ಮುನಿಯಪ್ಪ(ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಪ್ರಶ್ನೆ

ಅ. ಖನಿಜಗಳು ಇರುವ ಗಣಿಗಳನ್ನು ಗಣಿಗಾರಿಕೆಗೆ ಗುತ್ತಿಗೆ ನೀಡುವಾಗ ಪರಿಶಿಷ್ಟ